ದಿಃ14.12.2023 ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

13. ಅದಿನ ಅಮಾನತ್ತುಪಡಿಸಿಕೊಂಡಿದ್ದ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ವರ್ಣರಂಜಿತ ಛಾಯಾಚಿತ್ರಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಒಟ್ಟಾಗಿ ಈಗ ನಿ.ಪಿ.18 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ

14. ಪೊಲೀಸ್ ಠಾಣೆಯಿಂದ ನಮ್ಮ ಕಚೇರಿ ಸುಮಾರು ಅರ್ಧ ಕಿಮೀ ಅಂತರದಲ್ಲಿ ಇರುತ್ತದೆ.

15. ನಾವು ಅರಣ್ಯ ಇಲಾಖೆಗೆ ಸಂಬಂಧಪಟ್ಟವರಾಗಿರುವುದರಿಂದ ದಿನದ 24 ಗಂಟೆಗಳ ಕಾಲ ಸತತವಾಗಿ ಕರ್ತವ್ಯದ ಮೇಲೆ ಇರುತ್ತೇವೆ.

16. ಸಾವದುರ್ಗ ರಾಜ್ಯ ಅರಣ್ಯ ಪ್ರದೇಶದಲ್ಲಿ ನಮ್ಮ ಕರ್ತವ್ಯ ಇರುತ್ತದೆ.

17. ಸದರಿ ಸಾವನದುರ್ಗ ಅರಣ್ಯ 6,774 ಎಕರೆ 26 ಗುಂಟೆ ವಿಸ್ತೀರ್ಣದ್ದಾಗಿರುತ್ತದೆ.

18. ಸದರಿ ಅರಣ್ಯಕ್ಕೆಂದು ನನ್ನನ್ನು ಒಳಗೊಂಡು ಸುಮಾರು 7-8 ಜನ ಇರುತ್ತೇವೆ.

19. ನಮ್ಮ ಕಚೇರಿಯಿಂದ ಸಾವನದುರ್ಗ ಅರಣ್ಯ 8 ಕಿಮೀ ಅಂತರದಲ್ಲಿ ಇರುತ್ತದೆ.

20. ದಿಃ08.03.2017 ರಂದು ಚಾಸಾ.23 ಇವರು ನನಗೆ ಮಾಗಡಿ ಪೊಲೀಸ್ ಠಾಣೆಗೆ ಹೋಗಲು ಹೇಳಿದಾಗ ನಾನು ನಮ್ಮ ಮಾಗಡಿಯ ಅರಣ್ಯ ಕಚೇರಿಯಲ್ಲಿ ಇದ್ದೆನು.

21. ಆ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಸದರಿ ಅರಣ್ಯ ಕಚೇರಿಯಲ್ಲಿ 3-4 ಜನ ಸಿಬ್ಬಂದಿ ವರ್ಗದವರು ಇದ್ದರು.

22. ನನ್ನೊಂದಿಗೆ ಚಾಸಾ.23 ಇವರೂ ಸಹ ಮಾಗಡಿಯ ಸಿಪಿಐ ಕಚೇರಿಗೆ ಹೋಗಿರುತ್ತೇವೆ.

23. ಸದರಿ ಸಿಪಿಐರವರ ಕಚೇರಿಯಲ್ಲಿ ಸುಮಾರು 5 ರಿಂದ 10 ನಿಮಿಷಗಳ ಕಾಲ ಇದ್ದು, ಅಲ್ಲಿಂದ ಪೊಲೀಸರ ಜೀಪಿನಲ್ಲಿ ಹೊಸಹಳ್ಳಿ ರಸ್ತೆಯ ಎಡಭಾಗಕ್ಕೆ ಇರುವ ಸುಕೂರ್ ಸಾಬ್ ಎಂಬಾತನ ಜಮೀನಿಗೆ ಹೋಗಿರುತ್ತೇವೆ.

24. ಆಗ ನಾವು ಪ್ರಯಾಣಿಸಿದ ಜೀಪಿನ ನಂಬರ್ ನನಗೆ ಗೊತ್ತಿಲ್ಲ.

25. ನಾವು ಮಾಗಡಿ ಪೊಲೀಸ್ ಠಾಣೆಗೆ ಹೋದಾಗ 1 ನೇ ಆರೋಪಿ ವಾಸಿಲ್ ಈತನು ಪೊಲೀಸ್ ಠಾಣೆಯಲ್ಲಿಯೇ ಇದ್ದನು.

26. ಮಾಗಡಿ ಪೊಲೀಸ್ ಠಾಣೆಯಿಂದ ಸದರಿ ಸುಕೂರ್ ಸಾಬ್ ದರ್ಗಾ ಸುಮಾರು ಒಂದೂವರೆ ಕಿಮೀ ಅಂತರದಲ್ಲಿ ಇರುತ್ತದೆ.

27. ಹೊಸಹಳ್ಳಿ ರಸ್ತೆಯಿಂದ ಸದರಿ ದರ್ಗಾ 60-70 ಅಡಿಗಳ ಅಂತರದಲ್ಲಿ ಇರುತ್ತದೆ.

28. ಸ್ಥಳದಲ್ಲಿ ರಕ್ತ ಬಿದ್ದಿರುವ ಯಾವುದೇ ನಿಶಾನೆಗಳು ಕಂಡುಬಂದಿರುವುದಿಲ್ಲ.

29. ದರ್ಗಾದ ಒಳಗೆ ನಾವು ಹೋಗಿರುವುದಿಲ್ಲ.

30. ಸದರಿ ದರ್ಗಾದ ಜಮೀನಿನಲ್ಲಿ ದರ್ಗಾದಿಂದ ಉತ್ತರಕ್ಕೆ ಸುಮಾರು 40 ಅಡಿಗಳ ಮೇಲೆ ಒಂದು ಶೌಚಾಲಯದ ರೀತಿ ಕೊಠಡಿ ಇದ್ದು ಅದರ ಒಳಗೆ ಹೋಗಿ ನಾವು ನೋಡಿರುವುದಿಲ್ಲ.

31. ಸದರಿ ದರ್ಗಾದ ಎಡಭಾಗದ ಗೋಡೆಯಿಂದ ಉತ್ತರಕ್ಕೆ ಸುಮಾರು 2-3 ಅಡಿಗಳ ಅಂತರದಲ್ಲಿ ಒಂದು ಕಲ್ಲಿನ ಟೇಬಲ್ ಥರಹ ಇದ್ದು ಅದರ ಕೆಳಗೆ ಏನಿತ್ತು ಎಂದು ನಾನು ನೋಡಿರುವುದಿಲ್ಲ.

32. ಇಷ್ಟನ್ನು ಹೊರತುಪಡಿಸಿ ಆ ಸುತ್ತಮುತ್ತಲೂ ಬೇರೇನೂ ಕಂಡುಬಂದಿರುವುದಿಲ್ಲ.

33. ಸದರಿ ದರ್ಗಾದ ಜಾಗ ಯಾರಿಗೆ ಸಂಬಂಧಪಟ್ಟಿದ್ದು ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ.

34. ಪೊಲೀಸರು ಮತ್ತು ಅರಣ್ಯ ಇಲಾಖೆಯವರು ಹಾಗೂ 1ನೇ ಆರೋಪಿ ಇವರನ್ನು ಹೊರತುಪಡಿಸಿ ಆ ಸಮಯದಲ್ಲಿ ಸದರಿ ಜಾಗದಲ್ಲಿ ಯಾರೂ ಇರಲಿಲ್ಲ.

35. ಸದರಿ ದರ್ಗಾದ ದಕ್ಷಿಣ ದಿಕ್ಕಿನಲ್ಲಿ ಸುಮಾರು 200-300 ಮೀಟರ್‌ಗಳವರೆಗೆ ಯಾವುದೇ ಕಟ್ಟಡಗಳು ಇರುವುದಿಲ್ಲ.

36. ಸ್ಥಳದಲ್ಲಿಯೇ ಪೊಲೀಸರು ತಂದಿದ್ದ ಲ್ಯಾಪ್‌ಟಾಪ್‌ನಲ್ಲಿ ಪಂಚನಾಮೆಯನ್ನು ಟೈಪ್ ಮಾಡಿದ್ದು, ಅದರ ಮೇಲೆ ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ.

37. ನಾವು ಸದರಿ ಸ್ಥಳಕ್ಕೆ ಬೆಳಿಗ್ಗೆ 10.00 ಗಂಟೆಗೆ ಹೋಗಿ 11.00 ಗಂಟೆ ಅಷ್ಟೊತ್ತಿಗೆ ಮಹಜರ್ ಮುಗಿಸಿ ಅಲ್ಲಿಂದ ನೇರವಾಗಿ 1ನೇ ಆರೋಪಿ ಮನೆಗೆ ಹೋಗಿರುತ್ತೇವೆ.

38. ಸದರಿ 1ನೇ ಆರೋಪಿತನ ಮನೆಯ ನಂಬರ್ ಏನು ಎಂಬುದನ್ನು ನಾನು ಅಷ್ಟೊಂದು ಗಮನಹರಿಸಿರುವುದಿಲ್ಲ.

39. ಸದರಿ 1ನೇ ಆರೋಪಿತನ ಮನೆ ಸುಣಕಲ್ಲು ಬೀದಿಯಲ್ಲಿದ್ದು ಅಲ್ಲಿ ಸಾಕಷ್ಟು ವಾಸದ ಮನೆಗಳು ಇರುತ್ತವೆ.

40. ಸದರಿ 1ನೇ ಆರೋಪಿತನ ಮನೆಯ ಅಕ್ಕ-ಪಕ್ಕದಲ್ಲಿ ಯಾರಿಗೆ ಸಂಬಂಧಿಸಿದ ವಾಸದ ಮನೆಗಳು ಇರುತ್ತವೆ ಎಂಬುದನ್ನು ಮತ್ತು ಅದರ ಚಕ್ಕುಬಂದಿಯನ್ನು ವಿಚಾರಿಸಿರುವುದಿಲ್ಲ.

41. 1 ನೇ ಆರೋಪಿತನ ಮನೆಯ ಹತ್ತಿರ ಹೋದಾಗ ದ್ವಿಚಕ್ರ ವಾಹನ ಆತನ ಮನೆಯ ಆವರಣದಲ್ಲಿ ಇತ್ತು.

42. ಅಲ್ಲಿ ಮಹಜರ್ ಮಾಡುವ ಸಮಯದಲ್ಲಿ ಸಾರ್ವಜನಿಕರು ಯಾರೂ ಬಂದಿರಲಿಲ್ಲ.

43. ಸದರಿ ಸ್ಥಳದ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಆ ಸ್ಥಳದ ಚಕ್ಕುಬಂದಿಯನ್ನು ನಾನು ಹೇಳಿ ಬರೆಸಿರುವುದಿಲ್ಲ, ಆದರೆ ಅವರೇ ಅದನ್ನು ಹೇಳಿದ್ದು ಈಗ ನನಗೆ ನೆನಪಿಲ್ಲ.

44. ಅದರಂತೆ ಸುಕೂರ್ ಸಾಬ್ ದರ್ಗಾದ ಹತ್ತಿರ ಚಕ್ಕುಬಂದಿಯನ್ನು ಹೇಳಿ ನಾನು ಬರೆಸಿರುವುದಿಲ್ಲ ಎನ್ನುವುದು ಸರಿ.

45. ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನದ ಚಾಸಿಸ್ ನಂಬರ್ ನನಗೆ ಗೊತ್ತಿಲ್ಲ.

46. ಸದರಿ ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನವನ್ನು ಪೊಲೀಸರು ಎಲ್ಲಿ ಒಯ್ದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

47. ಸದರಿ ದ್ವಿಚಕ್ರ ವಾಹನದ ಮಹಜರ್‌ನ್ನು ಬೆಳಿಗ್ಗೆ 11.00 ರಿಂದ 12.10 ರವರೆಗೆ ನಡೆದಿರುತ್ತದೆ.

48. ನಂತರ, ಮಗುವನ್ನು ಅಪಹರಣ ಮಾಡಿದ್ದ ಜಾಗ ಎಂದು 1 ನೇ ಆರೋಪಿತನು ಅದೇ ಸುಣಕಲ್ಲು ಬೀದಿಯಲ್ಲಿ ಕರೆದುಕೊಂಡು ಹೋಗಿರುತ್ತಾನೆ.

49. ಸದರಿ ಅಪಹರಣದ ಜಾಗ ಸದಾನಂದಾಚಾರ್ ಈತನ ಮನೆಯ ಮುಂದೆ ಇತ್ತು.

50. ಸದರಿ ಜಾಗದ ಹತ್ತಿರ ಸುತ್ತಲೂ ವಾಸದ ಮನೆಗಳು ಇರುತ್ತವೆ ಎನ್ನುವುದು ಸರಿ.

51. ಆ ಸಮಯದಲ್ಲಿ ಸದಾನಂದಾಚಾರ್ ಈತನನ್ನು ಕರೆಸಿರುವುದಿಲ್ಲ.

52. ಸದರಿ ಜಾಗಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಚಕ್ಕುಬಂದಿಯನ್ನು ಹೇಳಿ ಬರೆಸಿರುವುದಿಲ್ಲ.

53. ಸದರಿ 3 ಮಹಜರ್‌ಗಳಿಗೆ ನನ್ನನ್ನು ಮತ್ತು ಚಾಸಾ.23 ಇವರನ್ನು ಹೊರತುಪಡಿಸಿ ಬೇರೆ ಯಾವ ಸಾರ್ವಜನಿಕ ವ್ಯಕ್ತಿ ಬಂದಿರುವುದಿಲ್ಲ.

54. ನಾನು ಸುಕೂರ್ ಸಾಬ್ ದರ್ಗಾದ ಹತ್ತಿರ ಹೋಗಿರುವುದಿಲ್ಲ, ಯಾವುದೇ ದ್ವಿಚಕ್ರ ವಾಹನದ ಅಮಾನತ್ತಿನ ಪಂಚನಾಮೆಯನ್ನು ನನ್ನ ಸಮಕ್ಷಮದಲ್ಲಿ ಮಾಡಿರುವುದಿಲ್ಲ ಮತ್ತು ಯಾವುದೇ ಅಪಹರಣದ ಜಾಗಕ್ಕೆ ಹೋಗಿರುವುದಿಲ್ಲವಾದರೂ ಸಹ, ಪೊಲೀಸರು ತಯಾರುಮಾಡಿ ಇಟ್ಟಿದ್ದಂತಹ ಪಂಚನಾಮೆಗಳ ಮೇಲೆ ನಾನು ಕೇವಲ ಸಿಪಿಐ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

55. ಪೊಲೀಸರು 1ನೇ ಆರೋಪಿತನಿಗೆ ವಿಚಾರಣೆಗೆಂದು ಬರಲು ತಿಳಿಸಿದಾಗ ಆತನು ಸದರಿ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಸಿಪಿಐ ಕಚೇರಿಗೆ ಹೋಗಿದ್ದಾಗ ಆತನ ಸದರಿ ದ್ವಿಚಕ್ರ ವಾಹನವನ್ನು ತನ್ನ ವಶಕ್ಕೆ ಪಡೆದುಕೊಂಡು, ಅದನ್ನೇ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ಬಿಂಬಿಸಿರುತ್ತಾರೆ ಎನ್ನುವುದು ಸರಿಯಲ್ಲ.

56. ನನಗೆ ಪೊಲೀಸ್ ಠಾಣೆಯಿಂದ ಪಂಚನಾಗಲೆಂದು ಯಾವುದೇ ತಿಳುವಳಿಕೆ ಪತ್ರವನ್ನು ನೀಡಿರಲಿಲ್ಲ.

57. ನಿ.ಪಿ.18ರಂತಿರುವ ಫೋಟೋಗಳು ಎಲ್ಲಿ ಯಾರು ತೆಗೆದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

58. ಈ ಪ್ರಕರಣದಲ್ಲಿ ನನಗೆ ಖುದ್ದಾಗಿ ಯಾವುದೇ ಮಾಹಿತಿ ಇರದೇ ಇದ್ದರೂ ಸಹ, ನಾನು ಅರಣ್ಯ ಇಲಾಖೆಯ ಸರ್ಕಾರಿ ನೌಕರಸ್ಥನಾಗಿದ್ದು, ಸದರಿ ಪಂಚನಾಮೆಗಳ ಕುರಿತು ಕಂಠಪಾಠ ಮಾಡಿಕೊಂಡು ಪೊಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.